## ಟೆಕ್ಸ್ಟ್ 4ಬೇಬಿ

ಈ ಉಚಿತ ಆ್ಯಪ್‌ನಿಂದ ಗರ್ಭಿಣಿಯರು ಹಾಗೂ ಬಾಣಂತಿಯರು ತಜ್ಞರಿಂದ ಸಲಹೆಗಳನ್ನು ಪಡೆಯಬಹುದು. ಬರಹದ ಸಂದೇಶ ಕಳಿಸುವ ಯಾವುದೇ ಡಿವೈಸ್‌ನಲ್ಲಿ ಇದು ಕೆಲಸ ಮಾಡುತ್ತದೆ. ಅಗತ್ಯ ವಿಷಯಗಳ ಬಗ್ಗೆ ನೆನಪನ್ನೂ ಮಾಡುತ್ತದೆ. ಮಗುವಿಗೆ ಚುಚ್ಚುಮದ್ದು ಹಾಕಿಸುವ ದಿನವನ್ನು ಕೂಡಾ ನೆನಪಿಸುತ್ತದೆ. ಈ ಆ್ಯಪ್‌ನಲ್ಲಿ ವೈದ್ಯರು ತಿಳಿಸಿದ ಹೆರಿಗೆಯ ದಿನಾಂಕ, ನಂತರ ಮಗು ಹುಟ್ಟಿದ ದಿನವನ್ನು ನಮೂದಿಸಿದರೆ ಸಾಕು, ಹೆಸರಿನ ಅವಶ್ಯಕತೆಯೂ ಇಲ್ಲ. ಆದರೆ ವೈಯಕ್ತಿಕ ತೊಂದರೆಗಳ ಬಗ್ಗೆ ಪರಿಹಾರ ದೊರಕುವುದಿಲ್ಲ, ಏನಿದ್ದರೂ ಸಾಮಾನ್ಯ ಸಲಹೆಗಳಷ್ಟೆ.






## ಬ್ರಿಲಿಯಂಟ್‌ವಿಶನ್ ಒನ್‌ಶಾಟ್

ವಿಂಡೋಸ್ ಫೋನ್‌ನಿಂದ ಫೋಟೊ ತೆಗೆಯಲು ಅತ್ಯುತ್ತಮ ಅನುಕೂಲಗಳು ಇಲ್ಲಿವೆ. ಹಲವಾರು ಹೊಂದಾಣಿಕೆಗಳನ್ನು ಮಾಡಿಕೊಳ್ಳಬಹುದು. ವಿಶೇಷ ಪರಿಣಾಮಗಳನ್ನು ಜೋಡಿಸಬಹುದು. ಯಾವುದೇ ಸ್ಮಾರ್ಟ್‌ಫೋನ್‌ನಲ್ಲಿ ಲಭ್ಯವಿರುವ ಕ್ಯಾಮೆರಾಗಿಂತ ವಿಂಡೋಸ್ ಫೋನ್‌ನಲ್ಲಿರುವ ಫೋಟೊ ತೆಗೆಯುವ ಹಾಗೂ ಎಡಿಟ್ ಮಾಡುವ ಸಾಫ್ಟ್‌ವೇರ್ ಮೇಲ್ಮಟ್ಟದಲ್ಲಿದೆ. ಇದರಲ್ಲಿರುವ ನಿಯಂತ್ರಕಗಳು ಹಾಗೂ ಫಿಲ್ಟರ್‌ಗಳು ಮ್ಯಾನ್ಯುವಲ್ ಕ್ಯಾಮೆರಾದಂತಹ ಅನುಭವ ನೀಡುತ್ತವೆ. ಇದನ್ನು ವಿಂಡೋಸ್ ಸ್ಟೋರ್‌ನಿಂದ ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

## ವೈರ್

ಹಲವು ಮೆಸೇಜಿಂಗ್ ಆ್ಯಪ್‌ಗಳು ಮಾರುಕಟ್ಟೆಯಲ್ಲಿ ದಾಂಗುಡಿ ಇಡುತ್ತಿವೆ. ಸ್ಕೈಪ್, ವಾಟ್ಸ್‌ಆ್ಯಪ್, ಫೇಸ್‌ಬುಕ್ ಮೆಸೆಂಜರ್, ವೈಬರ್, ಕಿಕ್ ಮೊದಲಾದವು. ಆದರೆ ವೈಯಕ್ತಿಕ ಅಥವಾ ವಹಿವಾಟಿಗೆ ಸಂಬಂಧಿಸಿದ ಆ್ಯಪ್‌ಗಳನ್ನು ಆಯ್ಕೆ ಮಾಡಿಕೊಳ್ಳುವುದು ಉತ್ತಮ. ವೈರ್ ಅತ್ಯಂತ ಸುಂದರವಾದ ಮೇಲ್ಮೈ ಉಳ್ಳ ಮೆಸೇಜಿಂಗ್ ಸೇವೆಯಾಗಿದ್ದು ಗ್ರೂಪ್ ಮೆಸೇಜಿಂಗ್ ಮಾಡಲು ಹಾಗೂ ಫೋಟೊ ಶೇರ್ ಮಾಡಲು ಉತ್ತಮವಾದ ಆ್ಯಪ್. ಇದು ಹೆಚ್ಚು ಕಡಿಮೆ ಸ್ಕೈಪ್‌ನಂತೆ ಕೆಲಸ ಮಾಡುತ್ತದೆ. ಮೆಸೇಜಿಂಗ್, ವೈಸ್ ಕಾಲಿಂಗ್, ಫೋಟೊ ಶೇರಿಂಗ್, ಸಂಗೀತ, ವಿಡಿಯೊ ಮೊದಲಾದವುಗಳು ಈ ಉಚಿತ ಆ್ಯಪ್‌ನಲ್ಲಿವೆ.




■ ಎಸ್. ತುಂಬೆ


ಗೋಲ್ಡ್ ಲೋನ್

(ಚಿನ್ನಾಭರಣ ಸಾಲ)



ಕಡಿಮೆ ಚಿನ್ನ ಅಧಿಕ ಸಾಲ

ಕ್ಷಿಪ್ರ ಮಂಜೂರಾತಿ

ಆಕರ್ಷಕ ಬಡ್ಡಿದರ

ಷರತ್ತುಗಳು ಅನ್ವಯಿಸುತ್ತವೆ

ಹೆಚ್ಚಿನ ಮಾಹಿತಿಗಾಗಿ ಟೋಲ್ ಫ್ರೀ ಸಂಖ್ಯೆ 1800 425 1444ಗೆ ಕರೆ ಮಾಡಿ ಅಥವಾ ನಿಮ್ಮ ಸಮೀಪದ ಶಾಖೆಯನ್ನು ಸಂಪರ್ಕಿಸಿ

ಕರ್ಣಾಟಕ ಬ್ಯಾಂಕ್ ಲಿ.